# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 514 |
| ಸದಸ್ಯರ ಹೆಸರು | : | ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 08-12-2023. |
| ಉತ್ತರಿಸುವವರು | : | ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಭಾಗ್ಯಲಕ್ಷ್ಮಿ ಯೋಜನೆಯ ಫಲಾನುಭವಿಗಳ ಸಂಖ್ಯೆ ಎಷ್ಟು; | ಭಾಗ್ಯಲಕ್ಷ್ಮಿ ಯೋಜನೆಯ ಫಲಾನುಭವಿಗಳ ಸಂಖ್ಯೆ ಈ ಕೆಳಕಂಡಂತಿರುತ್ತದೆ. |
| ಆ. | ಭಾಗ್ಯಲಕ್ಷ್ಮಿ ಯೋಜನೆಯ ಫಲಾನುಭವಿಗಳಿಗೆ ಸರಿಯಾದ ಪ್ರಮಾಣದಲ್ಲಿ ಹಣವನ್ನು ಮಂಜೂರು ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಭಾಗ್ಯಲಕ್ಷ್ಮಿ ಯೋಜನೆಯಡಿ ಪ್ರತಿ ವರ್ಷವೂ, ಆಯಾ ವರ್ಷಕ್ಕೆ ನೋಂದಣಿಯಾಗುವ ಅಂದಾಜು 1.50 ಲಕ್ಷ ಫಲಾನುಭವಿಗಳಿಗೆ ಅನುಗುಣವಾಗಿ ಅನುದಾನ ಬಿಡುಗಡೆ ಮಾಡಲಾಗುತ್ತಿದ್ದು, ಸದರಿ ಅನುದಾನವನ್ನು ಸಂಬಂಧಿಸಿದ ವಿಮಾ ಕಂಪನಿ/ಅಂಚೆ ಕಛೇರಿಗೆ ಮಾಸಿಕ/ವಾರ್ಷಿಕ ಕಂತನ್ನು ಪಾವತಿಸಿ ಸಂಪೂರ್ಣವಾಗಿ ವೆಚ್ಚ ಮಾಡಲಾಗುತ್ತಿದೆ. |
| ಇ. | ಬಂದಿದ್ದಲ್ಲಿ, ಈ ಭಾಗ್ಯಲಕ್ಷ್ಮಿ ಯೋಜನೆಯ ಫಲಾನುಭವಿಗಳಿಗೆ ಎಷ್ಟು ತಿಂಗಳು ಹಣ ಪಾವತಿ ಮಾಡಲಾಗಿದೆ: ಹಾಗೂ ಬಾಕಿ ಉಳಿದಿರುವ ಫಲಾನುಭವಿಗಳ ಸಂಖ್ಯೆ ಎಷ್ಟು: ಫಲಾನುಭವಿಗಳ ಖಾತೆಗೆ ಯಾವ ದಿನಾಂಕದಂದು ಹಣವನ್ನು ಬಿಡುಗಡೆ ಮಾಡಲಾಗುತ್ತದೆ? | ಭಾಗ್ಯಲಕ್ಷ್ಮಿ ಯೋಜನೆಯಡಿ ಮಾಸಿಕ/ವಾರ್ಷಿಕ ಕಂತನ್ನು ಸಂಬಂಧಿಸಿದ ವಿಮಾ ಕಂಪನಿ/ ಅಂಚೆ ಕಛೇರಿಗೆ ಪಾವತಿಸುವುದರಿಂದ ಫಲಾನುಭವಿ ಖಾತೆಗೆ ಪಾವತಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. |

| ಯೋಜನೆ | ಫಲಾನುಭವಿಗಳ ಸಂಖ್ಯೆ |
|---|---|
| ಭಾಗ್ಯಲಕ್ಷ್ಮಿ ಯೋಜನೆ (2006-07 ರಿಂದ 2019-20 ರವರೆಗೆ) (LIC ಪಾಲುದಾರ ಹಣಕಾಸು ಸಂಸ್ಥೆ) | 28,97,084 |
| ಭಾಗ್ಯಲಕ್ಷ್ಮಿ-ಸುಕನ್ಯ ಸಮೃದ್ಧಿ ಯೋಜನೆ (2020-21 ರಿಂದ ಈವರೆಗೆ) (ಭಾಗ್ಯಲಕ್ಷ್ಮಿ ಯೋಜನೆಯನ್ನು ಅಂಚೆ ಇಲಾಖೆಯೊಂದಿಗೆ ವಿಲೀನಗೊಳಿಸಿದೆ) | 4,46,620 |
| ಒಟ್ಟು | 33,43,704 |

**ಸಂಖ್ಯೆ: ಮಮಇ 180 ಮಮಅ 2023**

**(ಲಕ್ಷ್ಮೀ ಆರ್. ಹೆಬ್ಬಾಳಕರ್)**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ
ವಿಕಲಚೇತನರ ಹಾಗೂ ಹಿರಿಯ ನಾಗರಿಕರ
ಸಬಲೀಕರಣ ಸಚಿವರು.